International Journal of Kannada Research 2021; 7(2): 84-88

International Journal of Kannada Research
www.kannadajournal.com

ISSN: 2454–5813
IJKR 2021; 7(2): 84-88
© 2021 IJKR
www.kannadajournal.com
Received: 07-02-2021
Accepted: 09-03-2021

**Dr. HD Umashankra**
Assistant Professor,
Govt. First Grade College
K. R. Pete, Mandya, Karnataka, India

**Corresponding Author:**
**Dr. HD Umashankra**
Assistant Professor,
Govt. First Grade College
K. R. Pete, Mandya, Karnataka, India

# ಹೋರಾಟದ ಹಾಡುಗಳು : ಪರಿಸ್ಥಿತಿ ಮತ್ತು ಪರ್ಯಾಯಗಳ ಹುಡುಕಾಟ

**Dr. HD Umashankra**

ಕನ್ನಡ ಸಾಹಿತ್ಯದಲ್ಲಿ ಹೋರಾಟದ ಹಾಡುಗಳಿಗೇ ಒಂದು ಮಹತ್ವದ ಸ್ಥಾನವಿದೆ. ದಲಿತ ಚಳುವಳಿಯ ಜೊತೆಜೊತೆಗೇ ಮೂಡಿ ಬಂದ ಈ ಹಾಡುಗಳು ಹೋರಾಟಕ್ಕೊಂದು ವೇಗವರ್ಧತೆಯನ್ನು ತಂದುಕೊಟ್ಟಿವೆ. ಕಲೆಗಾಗಿ ಕಲೆ ಎನ್ನುವುದನ್ನೇ ಧೂಳೀಪಟ ಮಾಡಿ ಕಲೆ ನೊಂದವರ ನೋವನ್ನು ಕೊನೆಯಾಗಿಸುವ ಅಸ್ತ್ರ ಎನ್ನುವಂತೆ ಮೂಡಿ ಬಂದವು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಚಳುವಳಿಯ ಕಾವಿನಲ್ಲಿ ಮೂಡಿಬಂದ ಈ ಹಾಡುಗಳು ಪರಿಸ್ಥಿತಿಯನ್ನು ನಿರೂಪಿಸುವಲ್ಲಿ ಮತ್ತು ಪರ್ಯಾಯವನ್ನು ಕಟ್ಟಿಕೊಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ.

ಹೋರಾಟದ ಹಾಡುಗಳ ಮುಖ್ಯ ನೆಲೆ ಸರಳ ಪದಗಳ ನಿರೂಪಣೆ. ಹಾಡುವಿಕೆಯೇ ಇದರ ಜೀವಾಳ. ಇದರಿಂದಾಗಿ ಹಾಡುಗಬ್ಬದ ಗೇಯತೆಗೆ ಹೆಚ್ಚು ಒತ್ತು ನೀಡಿರುವ ಈ ಹಾಡುಗಳು ಜನತೆಯ ಹೋರಾಟದ ಕೆಚ್ಚನ್ನು ಹೆಚ್ಚಿಸಿವೆ. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎನ್ನುವಂತೆ ಹೋರಾಟದ ಹಾದಿಗೆ ಇಡೀ ನೊಂದ ಜನಸಮೂಹವನ್ನೇ ತಂದು ನಿಲ್ಲಿಸುವಂತೆ ಪ್ರೇರೇಪಿಸುತ್ತವೆ. ಜಗತ್ತಿನ ಸಮಾನತೆ ಹೋರಾಟದ ಮೂಲಕವೇ ಬರಬೇಕೆನ್ನುವ ಹಂಬಲ ಈ ಹೋರಾಟದ ಹಾಡುಗಳಲ್ಲಿದೆ. ಆದ್ದರಿಂದಲೇ ಇದು ಅಣ್ಣ, ತಂಗಿ, ಅವ್ವ, ಅಪ್ಪ ಎನ್ನುವುದರ ಮೂಲಕವೇ ಹೋರಾಟಕ್ಕೆ ಎಲ್ಲರಿಗೂ ಕರೆಕೊಡುತ್ತದೆ. ಬಹುಶಃ ಕನ್ನಡ ಸಾಹಿತ್ಯದಲ್ಲಿ ಅಕ್ಕಂದಿರೆ, ಅಣ್ಣಂದಿರೆ ಎನ್ನುವದನ್ನು ನಿರೂಪಿಸಿದ ಮೊದಲ ಸಾಹಿತ್ಯ ಪರಂಪರೆ ಹೋರಾಟದ ಹಾಡುಗಳದೇ ಇರಬೇಕು.

ಇಂತಹ ಮಹತ್ವದ ನೆಲೆಯುಳ್ಳ ಹೋರಾಟದ ಹಾಡುಗಳು ಹಿಡಿದಿಟ್ಟ ವಸ್ತುಸ್ತಿತಿ ಮತ್ತು ಕಟ್ಟಿದ ಪರ್ಯಾಯಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

**ಹೋರಾಟದ ಹಾಡುಗಳು ಹಿಡಿದಿಟ್ಟ ವಸ್ತುಸ್ಥಿತಿ (ಪರಿಸ್ಥಿತಿ)**

ಈ ನಾಡ ಮಣ್ಣಿನಲ್ಲಿ
ಮಣ್ಣಾದ ಜನಗಳ ಕತೆಯ
ಈ ನಾಡ ಮಣ್ಣಿನಲ್ಲಿ
ಹೂವಾಗಿ ಅರಳಿದ ಜನರ
ಹಣ್ಣಿನ ಗಿಡಗಳಲ್ಲಿ
ಹಣ್ಣಾಗಿ ಉದುರಿದೋರ
ಕತೆಯನು ಹೇಳುತೀವಿ
ಕಿವಿಗೊಟ್ಟು ಕೇಳಿರಣ್ಣ
ನೋವಿನ ರಾಗವನ್ನು

ಜನತೆಯ ನಡುವಿನ ಕ್ರೂರ ವಾಸ್ತವಗಳನ್ನು ಜನತೆಯ ಮನದಾಳಕ್ಕೆ ತಲುಪಿಸಲು ಇಂತಹ ಹಾಡುಗಳು ಏಕಾಂತದಲ್ಲಿ ಹುಟ್ಟುವ ಬದಲು ಸಮೂಹದಲ್ಲಿ ಸೃಷ್ಟಿಯಾಗತೊಡಗಿದವು. ಜನತೆಯನ್ನು ಕಿವಿಗೊಟ್ಟು ಕೇಳಲು ಒತ್ತಾಯಿಸುತ್ತಾ ಈ ನಾಡ ಮಣ್ಣಿನಲ್ಲಿ ಮಣ್ಣಾದ ಜನಗಳ ಕತೆಯನ್ನು ಹೇಳಲು ಮುನ್ನುಗ್ಗಿವೆ. ಇಲ್ಲಿ ಮಣ್ಣಾದ ಜನಗಳು ಬೇರೆ ಯಾರೂ ಅಲ್ಲ; ದುಡಿದು ದುಡಿದು ಮೂಳೆಯಾದವರು. ಇವರೇ ಎಲ್ಲ ಹೋರಾಟದ ಹಾಡುಗಳ ಮುಖ್ಯ ಜೀವಾಳ. ಇದೇ ಈ ಹಾಡುಗಳ ವಸ್ತುಸ್ಥಿತಿಯೂ ಹೌದು.

ಕಾವ್ಯದಲ್ಲಿ ಕುಸುರಿಗೆಲಸವನ್ನು ಬಯಸುವ ಕಣ್ಣುಗಳಿಗೆ ಕಾವ್ಯದೊಳಗಿನ ಸಿಟ್ಟಾಗಲಿ, ಆವೇಶವಾಗಲಿ, ಹತಾಶೆಗಳಾಗಲಿ ತಿಳಿಯುವುದಿಲ್ಲ. ಏಕೆಂದರೆ ಕಾವ್ಯ ಇರುವುದೇ ಆನಂದವನ್ನು ಉಂಟುಮಾಡಲಿಕ್ಕೆ ಎಂಬ ನಿಲುವು ಇವರದು. ಆದರೆ... ಹೋರಾಟದ ಹಾಡುಗಳು ತನ್ನ ಸುತ್ತ ನಡೆದ ಘಟನೆಗಳನ್ನು ಮತ್ತು ಅದರೊಳಗಿನ ದೌರ್ಜನ್ಯ, ಅವಮಾನಗಳನ್ನು ಹಾಡಾಗಿ ರೂಪಿಸಿತು. ಈ ಹಿನ್ನೆಲೆಯಲ್ಲಿ ಹೋರಾಟದ ಹಾಡುಗಳಿಗೆ ತನ್ನ ಸುತ್ತಲಿನ ಜಗತ್ತಿನ ವಸ್ತುಸ್ಥಿತಿಯೇ ನರನಾಡಿಯಾಗುತ್ತದೆ. ಇದಕ್ಕೆ ಈ ಕೆಳಗಿನ ಹಾಡೇ ಮುಖ್ಯ ಪುರಾವೆ...

ಕೋಟಿ ಕೋಟಿ ಬಾದೆಗಳಲ್ಲಿ  
ಲಕ್ಷಾಂತರ ನೋವುಗಳಲ್ಲಿ  
ನೀ ಹುಟ್ಟಿ ಬೆಳೆದೆಯಮ್ಮ  
ನನ ತಂಗಿ ಅನಸೂಯ  
ನಿನಗಾದ ಅನ್ಯಾಯ  
ನಮ್ಮೆದೆಗೆ ಚೂರಿ ಇರಿತ  
ಗಾಯವ ಮರೆತು ಬದುಕಲಾರೆವು  
ನನ ತಂಗಿ ಅನುಸೂಯ । ಕೋಟಿ ।

ಈ ಹೋರಾಟದ ಹಾಡು ಮಾಲೂರು ತಾಲೂಕಿನ ಹುಣಸೆಕೋಟೆಯ ಬಡಕುಂಬಾರನ ಮಗಳಾದ ಅನಸೂಯಮ್ಮನ ಮಾನಭಂಗದ ಕಥೆಯನ್ನು ಹೇಳುತ್ತಿದೆ. ಇಲ್ಲಿ ಕೋಟಿ ಕೋಟಿ ಬಾಧೆಗಳಿವೆ, ಲಕ್ಷ ಲಕ್ಷ ನೋವುಗಳಿವೆ. ಇವುಗಳೊಳಗೇ ಜನಿಸಿದ ಹೆಣ್ಣುಮಗಳೊಬ್ಬಳ ಹತಾಶಾ ಸ್ಥಿತಿಯಿದೆ. ಈ ಹೆಣ್ಣುಮಗಳ ನೋವನ್ನು ತನ್ನ ನೋವೆಂದುಕೊಂಡು ಸಮುದಾಯದ ಕವಿಗಳು ಇದನ್ನು ಹಾಡಿನಲ್ಲಿ ಹಿಡಿದಿಟ್ಟು ಜನತೆಯ ಮುಂದೆ ತಂದು ಹೋರಾಟಕ್ಕೆ ಅಣಿಗೊಳಿಸಿದ್ದಾರೆ

ತುತ್ತು ಅನ್ನಕಾಗಿ  
ಸೇರುಬೆವರು ಸುರಿಸುತಾ  
ಊರೂರು ತಿರುಗುವರ್‍ಯಾರಣ್ಣ  
ಈ ನಾಡ ಕಟ್ಟಿದೋರು ನಾವೆಲ್ಲಿಗೋಗಬೇಕು  
ಕೂಲಿಯವರು ನಾವು ಕೇಳಣ್ಣ

ಕೇಳಿಸುವ ಮತ್ತು ಹಾಡಿಸುವ ಜಾಯಮಾನವೇ ದಲಿತರದ್ದು. ದುಡಿಮೆಗೆ ಪ್ರತಿಫಲ ಸಿಗದ ಅಸಹಾಯಕತೆಯ ನಿರೂಪಣೆಯೇ ಕಾವ್ಯವಾಗಿದೆ. ಈ ಅಸಹಾಯಕತೆ ತನ್ನ ಹೋರಾಟಕ್ಕೆ ಸಮಷ್ಟಿಯನ್ನು ಬಯಸುತ್ತದೆ. ಈ ಸಮಷ್ಟಿಯ ಜೊತೆಗೆ ಕಾವ್ಯ ಬೆರೆತಾಗಲೇ ಕ್ರಾಂತಿ ಆಗಲು ಸಾಧ್ಯ. ಇದು ಬಹುಪಾಲು ದಲಿತ ಕವಿಗಳ ಮೂಲ ಧ್ಯೇಯ. ಶೋಷಿತ ಸಮುದಾಯದ ಸಾಮಾಜಿಕ ಅಗತ್ಯಕ್ಕಾಗಿ ಹುಟ್ಟಿಕೊಂಡ ಈ ಹಾಡುಗಳು ದುಡಿವ ಸಮುದಾಯದ ಒಡಲಾಳದ ವೇದನೆಗಳನ್ನು ಹೊರಹಾಕಿವೆ. ಈ ಕವಿತೆಯ ಹಿಂದೆ ದುಡಿವ ಸಮುದಾಯಕ್ಕೆ ನ್ಯಾಯ ಸಿಗಬೇಕೆಂಬ ಆಶಯವಿದೆ. ಈ ಆಶಯವೇ ಇಲ್ಲಿ ಕಾವ್ಯವಾಗಿ ಮಾರ್ಪಾಡುಗೊಂಡಿದೆ.

ಕರ್ನಾಟಕದಲ್ಲಿ ದಲಿತ ಸಂಘರ್ಷ ಅಸ್ತಿತ್ವಕ್ಕೆ ಬಂದ ಮೇಲೆ ಹಳ್ಳಿ ಹಳ್ಳಿಗಳಲ್ಲಿ ನಡೆಯುವ ದಬ್ಬಾಳಿಕೆಗಳು ಜನತೆಯ ಮುಂದೆ ಬಂದು ನಿಂತವು. ಎಲ್ಲೇ ದಲಿತರ ಮೇಲೆ ದೌರ್ಜನ್ಯ ನಡೆದರೂ ಅಲ್ಲಿ ದಸಂಸ ನಿಂತು ಹೋರಾಡುತ್ತಿತ್ತು. ಈ ಹಿನ್ನೆಲೆಯಲ್ಲಿ ದೌರ್ಜನ್ಯದ ವಸ್ತುಸ್ತಿತಿಯನ್ನೆ ಕಾವ್ಯದ ವಸ್ತುವಾಗಿ ತಂದು ಹಾಡು ಕಟ್ಟಿ ಜನತೆಯ ಮುಂದೆ ತಂದು ನಿಲ್ಲಿಸುತ್ತಿದ್ದರು. ಇದಕ್ಕೆ ಈ ಹೋರಾಟದ ಹಾಡು ನಿರೂಪಿಸಿರುವ ದಲಿತರ ಕಗ್ಗೊಲೆಯೇ ಸಾಕ್ಷಿ.

ಭಾರತ ದೇಶದಲ್ಲಿ  
ಬಿಹಾರ ರಾಜ್ಯದ  
ಬೆಲ್ಚಿಯ ಗ್ರಾಮದಲ್ಲಿ  
ಹನ್ನೊಂದು ಜನ ದಲಿತರನ್ನು  
ನಿನ್ನಣ್ಣ ತಮ್ಮಂದಿರನ್ನು  
ಹಾಡು ಹಗಲಿನಲ್ಲೇ  
ಸುಟ್ಟು ಬೂದಿ ಮಾಡಿದರಲ್ಲೋ....

ಇದು ದಲಿತರ ಕತೆ. ಈ ಕತೆಯನ್ನು ತನ್ನ ಸಮುದಾಯದ ಅಕ್ಷರ ಕಲಿಯದ ಜನಕ್ಕೆ ಇದರ ಅರಿವು ಮೂಡಿಸಬೇಕಿತ್ತು. ಆ ಮೂಲಕ ಹೋರಾಟದ ನೊಗವನ್ನು ಎಲ್ಲರೂ ಹೊತ್ತುಕೊಳ್ಳಬೇಕಿತ್ತು. ಇದರ ಉದ್ದೇಶದಿಂದಲೇ ಹೋರಾಟದ ಹಾಡು ರೂಪುಗೊಂಡು ಜನತೆಗೆ ಹೊಸ ಇತಿಹಾಸವನ್ನು ತೋರಿಸಿಕೊಡುತ್ತಿದ್ದವು. ಬಿಹಾರದ ಬೆಲ್ಚಿಯಲ್ಲಿ ಹನ್ನೊಂದು ಜನ ದಲಿತರನ್ನು ಕೊಂದ ಕ್ರೂರ ಮುಖಗಳು ಹೋರಾಟದ ಹಾಡುಗಳ ಮೂಲಕ ಜನಮನದಲ್ಲಿ ನೆಲೆನಿಂತವು. ಇದು ದಲಿತರ ಇತಿಹಾಸ. ಇದೇ ರೀತಿಯಲ್ಲಿ ಎಸ್ಸೆಲ್ಸಿಯಲ್ಲಿ ತನ್ನ ಮಗ ಫೇಲಾಗಿ, ದಲಿತರ ಹುಡುಗ ಮುನಿವೆಂಕಟ ಉತ್ತೀರ್ಣನಾಗಿದ್ದಕ್ಕೆ ಅವನನ್ನು ಕೊಲೆ ಮಾಡಿಸಿದ ನೀಚತನದ ಕೃತ್ಯವನ್ನು ಹೋರಾಟದ ಹಾಡುಗಳು ಹಿಡಿದಿಟ್ಟವು. ಉತ್ಪ್ರೇಕ್ಷೆ ಇಲ್ಲದೆ ನೈಜ ಘಟನೆಗಳನ್ನು ಹೆಕ್ಕಿ ಜನತೆಯ ಮುಂದೆ ತಂದು ನಿಲ್ಲಿಸಿದ ಕೀರ್ತಿ ಹೋರಾಟದ ಹಾಡುಗಳಿಗೆ ಸಲ್ಲುತ್ತದೆ. ಇದರೊಂದಿಗೆ ದುಡಿಮೆಗೆ ಜಾತಿಭೇದವಿಲ್ಲ, ಆದರೆ ದುಡಿಯುವ ವರ್ಗಗಳನ್ನು ಜಾತಿ ಭೇದದ ಅಸಮಾನತೆಯ ವಸ್ತುಸ್ಥಿತಿಯಲ್ಲಿ ಇಡಲಾಗಿದೆ. ಒಂದು ಹೋರಾಟದ ಹಾಡು ದುಡಿಮೆಯ ಸಾರ್ವತ್ರಿಕತೆಯನ್ನು ಸಾರುವ ಬಗೆ ಹೀಗಿದೆ.

ಯಾವ ಕುಲವಯ್ಯ ನಮ್ಮದ್ಯಾಮತವಯ್ಯ  
ಯಾವ ಕುಲವಯ್ಯ ನಮ್ಮದ್ಯಾಮತವಯ್ಯ  
ಮಣ್ಣು ಕಲಸಿ ಇಟ್ಟಿಗೆ ಮಾಡಿ  
ಮನೆಯ ಕಟ್ಟಿ ಕೊಟ್ಟಾಗ  
ಮೈಸವೆಸಿ ಉತ್ತು ಬಿತ್ತಿ  
ಧಾನ್ಯ ರಾಶಿ ಹೊತ್ತಾಗ ! ಯಾ ಕುಲವಯ್ಯ!

ಇಲ್ಲಿ ದಿನನಿತ್ಯ ದುಡಿದು ದಣಿದು ಸವಕಲಾದ ಶೋಷಿತರ ದುಡಿಮೆಯ ಕರಾಳ ಚಿತ್ರಣಗಳಿವೆ. ದಿನನಿತ್ಯ ಇವರ ಬದುಕು ಕಳೆದು ಹೋಗುತ್ತಿರುವ ಪರಿಯನ್ನು ಮೇಲಿನ ಕವನ ಅತ್ಯಂತ ಸಮಂಜಸವಾಗಿ ಕಟ್ಟಿಕೊಟ್ಟಿದೆ. ಇಲ್ಲಿ ಮಣ್ಣು ಕಲಸಿ ಇಟ್ಟಿಗೆ ಮಾಡುವ ಜನರಿಂದ ಹಿಡಿದು ಅದರಿಂದ ಮನೆ ಕಟ್ಟುವವರು, ಮೈಸವೆಸಿ ಉತ್ತು ಬಿತ್ತು ಬೆಳೆ ಬೆಳೆವವರು ಸುಣ್ಣ ಬಣ್ಣ ಬಳಿವವರು, ತಮ್ಮದಲ್ಲದ ಬೀದಿ ಗುಡಿಸಿ ಚಂದ ಮಾಡುವವರು, ಮರ ಕಡಿದು ಮಂಚ ಮೇಜು ಮಾಡುವವರು, ವಿಗ್ರಹಗಳ ಕೆತ್ತಿದವರು, ಮಚ್ಚು ಹಾರೆ ಮಾಡಿದವರು, ಗಣಿಗಳಲ್ಲಿ ಕೆಲಸ ಮಾಡುವವರು, ಪೂಜೆಗಾಗಿ ಹೂ ಕೊಯ್ಯುವ ಬುಟ್ಟಿ ಹೆಣೆವವರು, ಅಕ್ಷರಕ್ಕೆ ಆಕಾರ ಕೊಡಲು ಮಸಿ ತಯಾರಿಸುವವರು, ದನದ ಚರ್ಮದಿಂದ ಕೆರ ಹೊಲೆಯುವವರು, ಕ್ಷೌರ ಮಾಡಿ ಅಂದಗೊಳಿಸುವವರು, ಕೊಳಕು ಬಟ್ಟೆ ಹೊಗೆಯುವವರು, ಎಲ್ಲ ಶ್ರಮಜೀವಿಗಳ ದಂಡೇ ಇದೆ. ಆದರೆ ಈ ಶ್ರಮದ ಮೂಲ ಪ್ರಯೋಜನ ಇವರಿಗೆ ಆಗಿದೆಯೇ, ಎಂಬುದೇ ಇಲ್ಲಿ ಮುಖ್ಯ. ಇಷ್ಟೆಲ್ಲಾ ಜನರು ತಮ್ಮದಲ್ಲದ ಕೆಲಸವನ್ನು ತಮ್ಮ ಮೇಲೆ ಹೇರಿಕೊಂಡಿದ್ದಾರೆ ಅಥವಾ ಇವರ ಮೇಲೆ ಒತ್ತಾಯಪೂರ್ವಕವಾಗಿ ಹೇರಲಾಗಿದೆ. ಕಾಯಕ ಮಾಡುತ್ತಲೇ ಲೋಕ ಕಾಣದ ನೆಲೆಯಲ್ಲಿ ಬದುಕುವ ಜನರ ನೈಜತೆಯೇ

ಹೋರಾಟದ ಹಾಡುಗಳ ಒಳಗೆ ಅನುರಣಿಸಿವೆ. ಈ ಹಿನ್ನೆಲೆಯಲ್ಲೆ ಹೇಳಿದ್ದು, ಹೋರಾಟದ ಹಾಡುಗಳು ವಸ್ತುಸ್ಥಿತಿಯನ್ನು ನಿರೂಪಿಸಿವೆ ಮತ್ತು ಇದಕ್ಕೆ ಅನುಗುಣವಾಗಿ ಪರ್ಯಾಯವನ್ನು ಸೂಚಿಸಿವೆ. ಈ ಪರ್ಯಾಯದ ನೆಲೆಗಳನ್ನು ಈ ಕೆಳಗಿನಂತೆ ಗ್ರಹಿಸಬಹುದು.

**ಹೋರಾಟದ ಹಾಡುಗಳು ತೋರಿದ ಪರ್ಯಾಯ ಮಾರ್ಗಗಳು**

ಬರುತಿಹೆವು ನಾವು ಬರುತಿಹೆವು
ಬರುತಿಹೆವು ನಾವು ಬರುತಿಹೆವು
ಯುಗಯುಗಳಿಂದ ನೀವ್ ತುಳಿದ ಜನಗಳ
ಕೊರಳ ದನಿಗಳು ನಾವು

ಇಲ್ಲಿ ದುಡಿಮೆಯ ಲಯವಿದೆ. ಹತಾಶೆಯ ಜೊತೆಗೆ ಕ್ರಾಂತಿಗೆ ಮುನ್ನುಗ್ಗುವ ತುಡಿತದ ಲಯ ಪ್ರಧಾನವಾಗಿ ನೆಲೆನಿಂತಿದೆ. ಸಿದ್ಧ ಮಾದರಿಯ ಲಯ ಬಿಟ್ಟು ಹೊಸ ಮಾದರಿಯ ಲಯವನ್ನು ಇಲ್ಲಿನ ಹಾಡುಗಳು ಕಂಡುಕೊಂಡಿದೆ. ಇಲ್ಲಿ ತಮಟೆಯ ಲಯಕ್ಕೆ ಅನುಗುಣವಾಗಿ ರಚನೆಯಾದ ಕವನಗಳಿವೆ. ಇದರ ಮೂಲಕ ತುಳಿತಕ್ಕೊಳಗಾದ ಜನ ಎದ್ದು ನಿಲ್ಲಲೇಬೇಕೆಂಬ ಎಚ್ಚರಿಕೆಯನ್ನು ಇಲ್ಲಿನ ಹಾಡುಗಳು ಮನದಟ್ಟು ಮಾಡಿವೆ.

ಶತಮಾನದ ನೋವು ಹಾಡಾಗಿ ಹೊರಹೊಮ್ಮಿ ದಲಿತ ಕಾವ್ಯದ ಸ್ವರೂಪ ಪಡೆದು ಕಾವ್ಯದ ಪರಂಪರಾ ನೆಲೆಗಟ್ಟುಗಳನ್ನು ಧಿಕ್ಕರಿಸಿತು. ದುಡಿಯುವ ದಲಿತರು ನಾಡನ್ನು ಕಟ್ಟಿದರು. ಹಾಗೆಯೇ ಅಕ್ಷರ ಕಲಿತ ದಲಿತರು ಒಡೆದ ಮನಸುಗಳನ್ನು ಕಟ್ಟಲು ಪ್ರಯತ್ನಿಸಿದರು. ಈ ಕಟ್ಟುವಿಕೆಯೇ ಜಗತ್ತನ್ನು ಬದಲಾಯಿಸುತ್ತದೆಂಬ ನಿಲುವು ದಲಿತ ಕವಿಗಳದು. ಇದನ್ನು ಕೆಳಗಿನ ಹಾಡು ನಿರೂಪಿಸುವುದು ಹೀಗೆ;

ಕಟ್ಟುತ್ತೇವ ನಾವು ಕಟ್ಟುತ್ತೇವ ನಾವು
ಕಟ್ಟೇ ಕಟ್ಟುತ್ತೇವ
ಒಡೆದ ಮನಸುಗಳ ಕಂಡ ಕನಸುಗಳ
ಕಟ್ಟೇ ಕಟ್ಟುತ್ತೇವ ನಾವು
ಕನಸ ಕಟ್ಟುತ್ತೇವ ನಾವು ಮನಸ ಕಟ್ಟುತ್ತೇವ
ಗೋಳಿಲ್ಲದ ಗುಂಡಿಲ್ಲದ ನಾಡ ಕಟ್ಟುತ್ತೇವ
ಕೋಟಿ ಮನಸಿನ ನೂರು ಕನಸಿನ
ಹಾಡ ಬರೆಯುತೇವ
ಈ ನೆಲದ ಹಾಡ ಬರೆಯುತೇವ

ದಲಿತರ ಹಕ್ಕು ಬಾಧ್ಯತೆಗಳಿಗಾಗಿ ತೀವ್ರತರವಾದ ಹೋರಾಟವನ್ನು ದಲಿತ ಸಂಘಟನೆ ಕೈಗೊಂಡಿತು. ಜೊತೆಗೆ ಕರ್ನಾಟಕದಲ್ಲಿ ದಲಿತರು ಎಚ್ಚೆತ್ತುಕೊಳ್ಳುವಂತೆ ಮಾಡುವಲ್ಲಿ ತನ್ನದೇ ಆದ ಕೊಡುಗೆ ನೀಡಿತು. ಅದರಲ್ಲೂ ಹೋರಾಟದ ಹಾಡುಗಳು ಈ ಸಂಘಟನೆಯ ಆರಂಭದಲ್ಲಿ ರಾಜ್ಯದ ಮೂಲೆಮೂಲೆಯನ್ನು ತಲುಪಿ ಹೋರಾಟದ ಕಿಡಿಯನ್ನು ಹಚ್ಚಿತು. ಇದರಿಂದಾಗಿಯೇ ಬೀದರ್‌ನಿಂದ ಬೆಂಗಳೂರಿನವರೆಗೂ, ಬೆಳಗಾಂನಿಂದ ಕೋಲಾರದವರೆಗೂ ಎಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆದರೂ ಅಲ್ಲಿ ಪ್ರತಿಭಟನೆ ನಡೆಸಲು ಎಲ್ಲರೂ ಒಗ್ಗೂಡುತ್ತಿದ್ದರು. ಈ ಒಗ್ಗೂಡುವಿಕೆಯ ಮೂಲಕ ಗೋಳಿಲ್ಲದ ನಾಡು ಕಟ್ಟುವ ಬಯಕೆ ಇವರದು.

ದಲಿತರ ಮೇಲಿನ ದೌರ್ಜನ್ಯದಲ್ಲಿ ಲೈಂಗಿಕ ಶೋಷಣೆಯು ಅತ್ಯಂತ ಪ್ರಧಾನವಾದುದು. ಈ ಶೋಷಣೆಗೆ ಹಲವು ಮುಖಗಳಿವೆ. ಈ ಮುಖಗಳಿಗೆ ತುತ್ತಾಗಿದ್ದು ಪ್ರಮುಖವಾಗಿ ದಲಿತ ಮಹಿಳೆ. ಧರ್ಮ, ಜಾತಿ, ವರ್ಣ, ವರ್ಗಗಳು ಮಹಿಳೆಯನ್ನು ಲೈಂಗಿಕ ದೌರ್ಜನ್ಯಕ್ಕೆ ಗುರಿಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ದುಡಿಯುವ ಮಹಿಳೆ ತನ್ನ ದುಡಿಮೆಯ ಸ್ಥಳಗಳಲ್ಲಿ ದಿನನಿತ್ಯ ಶೋಷಣೆಗೆ ಒಳಗಾಗುತ್ತಿದ್ದಾಳೆ. ಈ ಎಲ್ಲಾ ಶೋಷಣೆಯನ್ನು ಕೇವಲ ಮಹಿಳೆಗಷ್ಟೇ ಸೀಮಿತ ಮಾಡಲು ಬರುವುದಿಲ್ಲ. ಇದನ್ನು ಒಂದು ಹೋರಾಟದ ಹಾಡು ನಿರೂಪಿಸುವುದು ಹೀಗೆ,

ಗಂಡ ಹೆಂಡತಿ ಸಿನಿಮಾ ನೋಡಲು ಹೋದ್ರೆ
ರಕ್ಷಕ ಭಟರೆಂದು ಭಕ್ಷಕರು ಬಂದುಬಿಟ್ರು
ಖಾಕಿ ಬಟ್ಟೆಯವರು ಕನಿಕರವೇ ಇಲ್ಲದವರು
ನಿನ ಗಂಡನಾ ಕೊಂದರಾ ತಂಗ್ಯವ್ವ
ನಿನ ಮಾನ ದೋಚಿದರಾ ತಂಗ್ಯವ್ವ

ಇಲ್ಲಿ ಶೋಷಣೆಗೆ ಒಳಗಾಗಿರುವವರು ಮತ್ತು ಶೋಷಿಸಿದವರು ಇಬ್ಬರೂ ಇದ್ದಾರೆ. ಆದರೆ ಶೋಷಕರ ಮುಖವಾಡ ಮಾತ್ರ ಬೇರೆ ಇದೆ. ಇಲ್ಲಿ 'ರಕ್ಷಕ ಭಟರೆಂದು ಭಕ್ಷಕರು ಬಂದುಬಿಟ್ರು' ಎಂದು ಕವನ ನಿರೂಪಿಸುತ್ತಿದೆ. ಅಂದರೆ ಇಲ್ಲಿ ಸರಕಾರಿ ನೇಮಿತ ರಕ್ಷಕ ಪಡೆ ಇದೆ. ಆದರೆ ಆ ರಕ್ಷಕ ಪಡೆ ಬಡವರ ಪಾಲಿನ ಭಕ್ಷಕರೇ ಹೊರತು ರಕ್ಷಕರಲ್ಲ ಎಂಬುದನ್ನು ಘಟನೆ ಮೂಲಕ ಕಾವ್ಯ ಸಾಬೀತುಪಡಿಸುತ್ತಿದೆ. ಏಕೆಂದರೆ ಇವರು ಗಂಡ ಹೆಂಡತಿ ಸಿನಿಮಾ ನೋಡಲು ಹೋದರೆ ಗಂಡನನ್ನು ಕೊಂದು, ಆ ಹೆಣ್ಣಿನ ಮಾನ ಕಳೆದಿದ್ದಾರೆ. ಇದನ್ನು ನೋಡಿದರೆ ಸರಕಾರಿ ಅಧೀನದ ಕಾನೂನು, ನ್ಯಾಯ, ಪೊಲೀಸ್, ಎಲ್ಲವೂ ಬಡವರ ಪಾಲಿಗೆ ಶೋಷಿಸುವ ಮತ್ತೊಂದು ಮುಖಗಳೇ ಹೊರತು ಬೇರೇನೂ ಅಲ್ಲ. ಇವು ಶೋಷಕರ ಮುಖವಾಡಗಳು. ಇವರಿಂದ ಶೋಷಣೆಗೊಳಗಾದವರು ಅದರ ತೀವ್ರತೆಯಲ್ಲೇ ಬದುಕು ಮುಗಿಸುವಂತಾಗಿದೆ. ಗಂಡನನ್ನು ಕಳೆದುಕೊಂಡ ಹೆಣ್ಣು ದಿಕ್ಕಿಲ್ಲದ ಪರದೇಶಿಯಾಗುತ್ತಾಳೆ. ಇದರೊಂದಿಗೆ ಆ ಹೆಣ್ಣಿನ ಮೇಲಿನ ಲೈಂಗಿಕ ದೌರ್ಜನ್ಯವು ಇಡೀ ಕುಟುಂಬದ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತದೆ. ಇಲ್ಲಿ ಯಾರ ಪಾಲು ಎಷ್ಟು ಎಂದು ನೋಡಲು ಬರುವುದಿಲ್ಲ. ಶೋಷಣೆ ಎಂಬುದೇ ದಲಿತರ ಸಮಗ್ರ ಬದುಕನ್ನು ನಾಶಮಾಡಿಬಿಡುತ್ತದೆ ಎಂಬುದಷ್ಟೇ ಸತ್ಯ. ಮೇಲ್ವರ್ಗಗಳು, ಬಂಡವಾಳಶಾಹಿಗಳು, ಭೂಮಾಲೀಕರು ಮುಂತಾದವರಿಂದ ಅಷ್ಟೇ ಅಲ್ಲ. ಖಾಕಿ, ಖಾವಿ, ಖಾದಿಗಳಿಂದಲೂ ಕೂಡ ದಲಿತರ ಮೇಲಿನ ದೌರ್ಜನ್ಯ ತಪ್ಪಿದ್ದಲ್ಲ ಎಂಬುದನ್ನು ಹೋರಾಟದ ಹಾಡುಗಳು ತಮ್ಮ ಅಭಿವ್ಯಕ್ತಿಯಲ್ಲಿ ನಿರೂಪಿಸಿವೆ. ಅದಕ್ಕೆ ಅವು ಕರೆಕೊಡುವ ರೀತಿ ಹೀಗಿದೆ,

ಸೆರಗು ಸೊಂಟಕ್ಕೆ ಸುತ್ತಿಕೋ ತಂಗ್ಯವ್ವ
ಕುಡುಗೋಲು ಕೈಗೆತ್ತಿಕೋ ತಂಗ್ಯವ್ವ
ಹಸುಗೂಸು ಅತ್ತರೂ ಹಾಲು ಉಣಿಸಲು ಬಿಡರು
ನಡು ಮುರಿದು ಹೋದರೂ ನಾಟ್ಯಾಕು ಅಂತಾರೆ
ದಿನವಿಡೀ ನೀ ದುಡಿದರೂ ತಂಗ್ಯವ್ವ
ದಿನವೆಲ್ಲ ಉಪವಾಸ ತಂಗ್ಯವ್ವ

"ಪರಿಸ್ಥಿತಿಯನ್ನು ಬಿಂಬಿಸುವುದು ಮತ್ತು ಪರ್ಯಾಯವನ್ನು ರೂಪಿಸುವುದು ಈ ಹಾಡುಗಳ ಪ್ರಧಾನ ಜಾಯಮಾನ. ಮಾಡುವುದು ಮತ್ತು ಆಗುವುದು ಎರಡೂ ಜೊತೆಜೊತೆಯಲ್ಲೇ ನಡೆಯುವ ಪ್ರಕ್ರಿಯೆಗಳು. ಇರುವಿಕೆಯ ಸಮಸ್ಯೆಯನ್ನು ಮತ್ತು ಆಗುವಿಕೆಯ ಸವಾಲನ್ನು ಒಟ್ಟೊಟ್ಟಿಗೇ ಇಲ್ಲಿಯ ಹಾಡುಗಳು ಬೆಸೆಯುತ್ತವೆ. ಅಥವಾ ಈ ಎರಡೂ ಅಂಶಗಳು ಪ್ರತ್ಯೇಕ ಪ್ರತ್ಯೇಕವಾಗಿ ನಿಲ್ಲದೆ ಒಂದರೊಳಗೊಂದು ಕೂಡಿರುತ್ತವೆ." ಎಂದು ಬರೆಯುವ ಡಾ.ಬಿ.ಎಂ. ಪುಟ್ಟಯ್ಯನವರು ಹೋರಾಟದ ಹಾಡುಗಳ

ನಾಡಿಮಿಡಿತವನ್ನು ಸರಿಯಾಗಿಯೇ ಗ್ರಹಿಸಿದ್ದಾರೆ.

ಪುರುಷರಾಗಲಿ, ಮಹಿಳೆಯರಾಗಲೀ ತಮ್ಮ ದಬ್ಬಾಳಿಕೆ ಕೊನೆಗೊಳಿಸಿಕೊಳ್ಳಬೇಕಾದರೆ ಹೋರಾಟದ ಅನಿವಾರ್ಯತೆ ಇದೆ ಎಂಬುದನ್ನು ಕಾವ್ಯ ಒತ್ತಿ ಹೇಳುತ್ತಿದೆ. ಇದು ಉತ್ಪತ್ತಿಯನ್ನು ಕಿತ್ತು ತಿಂದ ಗೋಳಿನ ಕಥೆ. ಈ ಉತ್ಪತ್ತಿಯಲ್ಲಿ ಇಬ್ಬರಿಗೂ ಸಮಾನ ಸ್ಥಾನ. ಭೂಮಿ ಉತ್ತು ಬಿತ್ತು ಹಸನು ಮಾಡಿ ಬೆಳೆ ತೆಗೆಯುವವರು ಇವರು. ಬೆಳೆದ ಬೆಳೆಯ ತಿನ್ನುವವರು ಬೇರೆಯವರು. ಈ ತಾರತಮ್ಯದ ಸಾಮಾಜಿಕ ನೆಲೆಗಳನ್ನು ಅನಾವರಣಗೊಳಿಸುತ್ತಲೇ ಹೋರಾಟದ ಹಾಡು ಹೋರಾಟಕ್ಕೆ ಕರೆಕೊಡುತ್ತದೆ. ಅದರಲ್ಲೂ ಮಹಿಳೆ ಹೋರಾಟದ ಮುಂಚೂಣಿಗೆ ಬರಬೇಕೆಂದು ಒತ್ತಾಯಿಸುತ್ತದೆ. ಬಹುಶಃ ಮಹಿಳೆಯನ್ನು ಹೋರಾಟದ ಮುಂಚೂಣಿಗೆ ತರಲೇಬೇಕೆಂಬ ತೀವ್ರ ಸಂಕಲ್ಪವನ್ನು ತೊಟ್ಟಿದ್ದು ದಲಿತ ಸಂಘಟನೆಗಳೇ ಮೊದಲು ಇರಬಹುದು.

> ಡಬ್ಲ್ಯೂ ಡಬ್ಲ್ಯೂ ಡಬ್ಲ್ಯೂ ಡಾಟ್ ಕಾಮ್
> ಡಬ್ಲ್ಯೂ ಡಬ್ಲ್ಯೂ ಡಬ್ಲ್ಯೂ ಡಾಟ್ ಕಾಮ್
> ಜಾಲಾಂತರ್ಜಾಲದಲ್ಲಿ ಜಗತ್ತನ್ನೇ ನೋಡುತ್ತೀರಿ
> ಇಂಟರ್ ನೆಟ್ ವೆಬ್ ಸೈಟಲಿ ಲೋಕವೆಲ್ಲ ಕಾಣ್ತೀರಿ
> ಹಂಗರವಳ್ಳಿ ಕಾಣಲಿಲ್ಲ ಯಾಕೆ ಹೇಳುವಿರಾ
> ಕಂಬಾಲಪಲ್ಲಿ ಕಾಣಲಿಲ್ಲ ಯಾಕೆ ಹೇಳುವಿರಾ
> ಪ್ರಶ್ನೆಯೊಂದ ಕೇಳುತೀವಿ ಹೇಳಿ ಉತ್ತರ । ಡಬ್ಲ್ಯೂ ಡಬ್ಲ್ಯೂ

ಬೆಂಗಳೂರನ್ನು ಸಿಂಗಪುರ ಮಾಡುತ್ತೇನೆ ಎನ್ನುವವವರು ಫುಟ್‌ಪಾತಿನ ಜನರ ಕಡೆ ಕಣ್ಣು ಹಾಯಿಸದಿರುವ ಆಳುವ ವರ್ಗ ಇಲ್ಲಿದೆ. ಪ್ರಗತಿ ಹೆಸರಿನಲ್ಲಿ ತಮ್ಮ ನಿರಂತರ ಆಳುವ ಆಕಾಂಕ್ಷೆಯನ್ನು ಈ ಆಳುವ ವರ್ಗ ಉಳಿಸಿಕೊಂಡು ಬರುತ್ತಿದೆ. ಇದರ ಹುನ್ನಾರಗಳನ್ನು ಹೋರಾಟದ ಹಾಡು ಪ್ರಶ್ನೆ ಕೇಳುವ ಮೂಲಕ ಬಯಲಿಗೆಳೆಯುತ್ತಿದೆ. ವಿದೇಶಿ ನೀತಿಗಳಿಗೆ ಬಲಿಯಾಗಿ ಜಾಗತೀಕರಣಕ್ಕೆ ದೇಶವನ್ನು ಬಲಿಕೊಟ್ಟಿರುವ ಇಲ್ಲಿನ ಆಳುವ ವರ್ಗ ನಿರಂತರ ಲೂಟಿಯನ್ನು ಮುಂದುವರೆಸಿದೆ. ಇದರ ವಿರುದ್ಧ ಮೇಲಿನ ಹೋರಾಟದ ಹಾಡು ಎಚ್ಚರಿಕೆಯ ಅನಿವಾರ್ಯತೆಯನ್ನು ಜನತೆಯ ಮುಂದಿಟ್ಟಿದೆ. ಈ ಮೂಲಕ ನಾವು ಯಾವುದರ ವಿರುದ್ಧ ನಿಲ್ಲಬೇಕೆಂದು ಒತ್ತಿ ಹೇಳುತ್ತಿದೆ.

ಹಸಿವು ಅವಮಾನಗಳು ಶೋಷಿತರ ಬಹುಮುಖ್ಯ ಕೊರತೆಗಳು. ಈ ಕೊರತೆಗಳನ್ನು ತನ್ನ ಜನರಿಗೆ ತಿಳಿಸುತ್ತಲೇ ಅದಕ್ಕೆ ಕಾರಣಕರ್ತರ ವಿರುದ್ಧ ತನ್ನ ಧಿಕ್ಕಾರದ ದನಿಯನ್ನು ನಿರಂತರವಾಗಿ ಕೂಗುತ್ತಾ ಅವುಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂಬ ತುಡಿತ ಶೋಷಿತರ ರಾಜಕೀಯ ನಿಲುವು.

> ಕುಂತ ಮನಗಳೆ
> ನಿಂತ ಮನಗಳೆ
> ಕೇಳದೆ ಹೊಸನುಡಿ
> ಕಾಣದೆ ಕೆಂಗಿಡಿ
> ಹೋರಾಟವೆ ದಾರಿ
> ಕೊನೆಗಾಣದ ಬಾಳಿನ ಗೋಳಿಗೆ
> ಹೋರಾಟವೆ ದಾರಿ

ಶೋಷಿತ ವ್ಯವಸ್ಥೆಯ ಕೊನೆಗಾಣದ ಬಾಳಿಗೆ ಹೋರಾಟವೆ ದಾರಿಯಾಗಿದೆ. ರಾಜಕಾರಣದಲ್ಲಿ ಎರಡು ರೀತಿಯ ರಾಜಕಾರಣವಿದೆ. ಒಂದು ಶೋಷಕರ ರಾಜಕಾರಣ ಮತ್ತೊಂದು ಶೋಷಿತರ ರಾಜಕಾರಣ. ಇವೆರಡರ ನೆಲೆಗಳು ಒಂದೇ, ಅಸ್ತಿತ್ವ ಒಂದೇ, ಆದರೆ ಪರಿಣಾಮಗಳು ಮಾತ್ರ ಬೇರೆ ಬೇರೆ. ಶೋಷಕರು ನಿರಂತರವಾಗಿ ತಾವು ಮೇಲ್ಪದರದಲ್ಲೇ ಇರಬೇಕೆಂಬ ತವಕ ಅವರದು. ಅಂದರೆ ಕಾನೂನು ಕಟ್ಟಳೆ, ಧರ್ಮ, ಶಾಸ್ತ್ರ ಮುಂತಾದವುಗಳನ್ನು ತಮಗೆ ಹೇಗೆ ಬೇಕೋ ಹಾಗೆ ತಿರುಚಿಕೊಂಡು ಸದಾ ಆಳುವ ವರ್ಗವಾಗಿ ಮಾರ್ಪಾಡುಗೊಂಡು ತಮ್ಮ ಆಳುವ ಹಕ್ಕಿಗೆ ಮೆಟ್ಟಿಲುಗಳನ್ನಾಗಿ ಶೋಷಿತರನ್ನು ಸದಾ ಶೋಷಿತ ನೆಲೆಯಲ್ಲೇ ಇರಿಸಿ, ಅವರ ಉತ್ಪಾದನೆಯನ್ನು ಸದಾ ಅನುಭವಿಸುತ್ತಾ, ವರ್ಗ, ವರ್ಣ, ಜಾತಿಯ ತಾರತಮ್ಯಗಳು ಸದಾ ನೆಲೆ ನಿಲ್ಲುವಂತೆ ಮಾಡಿ, ತಾವು ಉತ್ಪಾದಕರಂತೆ ಪ್ರತಿಬಿಂಬಿಸಿ, ಮೂಲಭೂತ ಸವಲತ್ತುಗಳನ್ನೆಲ್ಲಾ ಅನುಭವಿಸುತ್ತಾ ದರ್ಪದಿಂದ ಮೆರೆಯುವುದು ಶೋಷಕರ ರಾಜಕಾರಣ, ಆದರೆ ಇದನ್ನೆಲ್ಲಾ ಬುಡಮೇಲು ಮಾಡಿ ಅವುಗಳ ವಿರುದ್ಧ ನಿರಂತರವಾಗಿ ಹೋರಾಡುತ್ತಾ, ಅವುಗಳನ್ನೆಲ್ಲಾ ಬದಲಾಯಿಸಬೇಕೆಂಬ ದೃಢ ಸಂಕಲ್ಪ ಶೋಷಿತರ ರಾಜಕಾರಣ. ಶೋಷಕರಿಗೆ ಶೋಷಣೆ ಮಾಡುವುದೇ ಕಾಯಕವಾದರೆ ಶೋಷಿತರಿಗೆ ಆ ಶೋಷಣೆಗೆ ಧಿಕ್ಕಾರ ಕೂಗಿ ಹೋರಾಡಿ ಸಮ ಸಮಾಜ ತರುವುದೇ ಕಾಯಕ. ಈ ಶೋಷಣೆ ತೀವ್ರತರವಾಗಿ ಕಾಡತೊಡಗಿದಾಗ ಶೋಷಣೆಗೊಳಗಾದ ಮನುಷ್ಯನಿಂದ ಹೊರಡುವ ಮಾತುಗಳು ಈ ಕೆಳಗಿನಂತೆ ಮೂಡುತ್ತವೆ.

> ನಾವು ಬೆವರನು ಸುರಿಸಿ ದುಡಿಯುವ ಜನ
> ನಮ್ಮ ಬೆವರಿನ ಪಾಲನು ಕೇಳುವೆವು
> ತುಂಡು ಭೂಮಿಯಲ್ಲ ಒಂದು ದೇಶವಲ್ಲ
> ಇಡೀ ಭೂಗೋಳವನೇ ಕೇಳುವೆವು
> ನಾವು ಬೆವರನು ಸುರಿಸಿ ದುಡಿಯುವ ಜನ

ಈ ದೇಶದ ಬಂಡವಾಳಶಾಹಿಗಳಿಗೂ, ದೇಶ ಆಳುವವರಿಗೂ ಒಂದು ಅವಿನಾಭಾವ ಸಂಬಂಧವಿದೆ. ಅವರಿದ್ದರೆ ಇವರು, ಇವರಿದ್ದರೆ ಅವರು ಎಂಬುವಷ್ಟರ ಮಟ್ಟಿಗೆ ಆರ್ಥಿಕತೆ ಅವರಿಬ್ಬರನ್ನು ಆವರಿಸಿಕೊಂಡಿದೆ. ವಿದೇಶಿ ಬಂಡವಾಳ ಹೂಡಿಕೆದಾರರಿಗೆ ಮತ್ತು ದೇಶೀಯ ಬಂಡವಾಳ ಹೂಡಿಕೆದಾರರಿಗೆ ವಿಶೇಷ ಸವಲತ್ತು ಒದಗಿಸುವ ಇಲ್ಲಿನ ರಾಜಕಾರಣಿಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಇವರ ಸಂಪತ್ತು ವರ್ಷದಿಂದ ವರ್ಷಕ್ಕೆ ಕೋಟಿ ಕೋಟಿಗಳಲ್ಲಿ ದ್ವಿಗುಣಗೊಳ್ಳುವಂತೆ ನೋಡಿಕೊಂಡರು. ಜೊತೆಗೆ ಇವರೂ ಸಹ ವಂಶ ಪಾರಂಪರ್ಯವೆಲ್ಲಾ ಕೂತುಣ್ಣುವಷ್ಟು ಆಸ್ತಿಯನ್ನು ಕೂಡಿಟ್ಟುಕೊಂಡರು. ಇಂತಹ ಸ್ವಾರ್ಥ ಸಾಧನೆಗಾಗಿ ಈ ಮಣ್ಣಿನ ದುಡಿಯುವ ಜನತೆಯನ್ನು ಬಲಿಕೊಟ್ಟರು. ಭೂಮಿ ದಮಿನಿತರಿಂದ ದೂರ ನಿಂತಿತು. ದುಡಿಯುವ ಜನ ಭೂಮಿಯ ನಿಜವಾದ ವಾರಸುದಾರರು. ಅವರು ಮಾತ್ರ ಭೂಮಿಗೆ ಹಕ್ಕುದಾರರು. ಈ ಹಿನ್ನೆಲೆಯಲ್ಲಿ ಭೂಮಿ ಸಿಗುವವರೆಗೆ ಹೋರಾಟ ನಿಲ್ಲಬಾರದೆಂಬ ತವಕವನ್ನು ಹೋರಾಟದ ಹಾಡುಗಳು ತಮ್ಮ ಒಡಲಾಳದ ದನಿಯಾಗಿಸಿಕೊಂಡವು.

ಇಂತಹ ವರ್ಗಗಳನ್ನು ಬುಡಸಮೇತ ಕಿತ್ತೊಗೆಯಬೇಕು. ಆಗಲೇ ಸಮಾನತೆಯ ನಾಡು ಕಟ್ಟಲು ಸಾಧ್ಯ. ಇಂತಹ ನಾಡು ಕಟ್ಟಲು ನೊಂದವರೇ ಧಿಕ್ಕಾರ ಕೂಗಲು ಮುಂದಾಗಬೇಕು. ಇದರ ಆಲೋಚನೆಗೆ ಪುಷ್ಟಿ ನೀಡಲೋ ಎಂಬಂತೆ ದಲಿತರಿಂದ ಕಾವ್ಯವೂ ತೆರೆದುಕೊಂಡಿತು.

> ವರ್ಗ ಕದನ ನಮ್ಮದೋ
> ವರ್ಗ ಪ್ರೇಮ ನಿಮ್ಮದೋ

ವರ್ಗವಿಲ್ಲದ ರಾಜ್ಯವೋ
ಹೋರಾಡಿ ತಂದೆ ತರುವೆವು

ವರ್ಗವಿಲ್ಲದ ರಾಜ್ಯ ತರಲು ಹೋರಾಟವೊಂದೇ ದಾರಿ ಎನ್ನುವುದನ್ನು ದಲಿತ ಕಾವ್ಯ ಅಭಿವ್ಯಕ್ತಿಸಿದೆ. ಹಳ್ಳಿಯ ಮೂಲಭೂತ ಅವಶ್ಯಕತೆಯಿಂದ ಹಿಡಿದು ವಿಜ್ಞಾನ ತಂತ್ರಜ್ಞಾನ ಮುಂದುವರೆಯಲು ಶ್ರಮಿಕ ಶಕ್ತಿಯೇ ಕಾರಣ. ಅದು ಬೆಳವಣಿಗೆ ಹೊಂದಿ ಉಳ್ಳವರ ಗಾಳಕ್ಕೆ ಸಿಲುಕಿ, ಶ್ರಮಿಕರ, ಕಷ್ಟಜೀವಿಗಳ, ಬುಡಕಟ್ಟು ಜನರ, ಕಾರ್ಮಿಕರ ಶೋಷಣೆಗೆ ದಾರಿ ಮಾಡಿಕೊಡುತ್ತದೆ. ದುಡಿಯುವ ವರ್ಗ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯಕ್ಕಾಗಿ ಅದು ಒತ್ತಾಯಿಸಿದೆ. "ಸಮಾಜವಾದಿ ಕ್ರಾಂತಿ ಬರುವುದನ್ನು ಕಂಡು ಆಳುವ ವರ್ಗಗಳು ತತ್ತರಿಸಲಿ, ಕಾರ್ಮಿಕ ವರ್ಗಕ್ಕೆ ಕಳೆದುಕೊಳ್ಳಲು ಉಳಿದಿರುವುದು ದಾಸ್ಯದ ಸಂಕೋಲೆಗಳಷ್ಟೇ. ಆದರೆ ಪಡೆಯಲು ಸಮಸ್ತ ಜಗತ್ತೇ ಇದೆ. ಎಲ್ಲ ದೇಶಗಳ ಶ್ರಮಜೀವಿಗಳೇ ಒಂದಾಗಿ" ಎಂಬ ಮಾರ್ಕ್ಸ್‌ನ ವಿಚಾರಧಾರೆ. ಇದು ಹೋರಾಟದ ಹಾಡುಗಳ ಉದ್ದಕ್ಕೂ ಕೆಲಸ ಮಾಡಿರುವುದನ್ನು ನೋಡಬಹುದು.